ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಸೋಮವಾರ, ೦೪, ಮೇ, ೨೦೨೬ (ವೈಶಾಖ, ೧೪, ಶಕವರ್ಷ, ೧೯೪೮)	ಸಂಚಿಕೆ ೮೨
Volume - 161	BENGALURU, MONDAY, 04, MAY, 2026 (VAISHAKHA , 14, SHAKAVARSHA, 1948)	Issue 82

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಅಧಿಕಾರಿ / ಸಿಬ್ಬಂದಿಗಳ ವಿವಿಧ ಹುದ್ದೆಗಳ ವೃಂದ ಬಲವನ್ನು ಹೆಚ್ಚಳ ಮಾಡುವ ಬಗ್ಗೆ.

ಓದಲಾಗಿದೆ :

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದಿರುವ ಪತ್ರ ಸಂಖ್ಯೆ: ಕಲೋ/ ಸಿಬ್ಬಂದಿ-1/21/2024-25, ದಿನಾಂಕ 04.10.2024, 16.12.2024 ಮತ್ತು 14.01.2026.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಲೋ/ಸಿಬ್ಬಂದಿ-1/24/2024-25, ದಿನಾಂಕ 20.12.2024 ಮತ್ತು 27.05.2025
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಲೋ/ಸಿಬ್ಬಂದಿ (1)/15/2025-26, ದಿನಾಂಕ 22.01.2026

ಪ್ರಸ್ತಾವನೆ :

ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ವಿವಿಧ ಹುದ್ದೆಗಳ ಸೃಜನೆಯನ್ನು ಕೋರಿ ಮೂರು ಪ್ರತ್ಯೇಕ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ.

2) ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪತ್ರ ದಿನಾಂಕ 14.10.2024 ರಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಸುಗಮ ಆಡಳಿತ ಹಿತದೃಷ್ಟಿಯಿಂದ, ಸಂಸ್ಥೆಯ ಎಲ್ಲಾ ವಿಭಾಗಗಳಿಗೂ ಸೇರಿದಂತೆ ಒಟ್ಟಾರೆಯಾಗಿ ಈ ಕೆಳಕಂಡ ಒಟ್ಟು 339 ಅಧಿಕಾರಿ / ಸಿಬ್ಬಂದಿಗಳ ಹುದ್ದೆಗಳನ್ನು ಹೊಸದಾಗಿ ಸೃಜಿಸುವಂತೆ/ಮಂಜೂರು ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೇಳಲಾದ ಮಾಹಿತಿಯನ್ನು ದಿನಾಂಕ 16.12.2024 ಮತ್ತು 14.01.2026 ಪತ್ರಗಳಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಒದಗಿಸಿರುತ್ತದೆ.

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಪ್ರಸ್ತುತ ಇರುವ ಹುದ್ದೆಗಳ ಸಂಖ್ಯೆ	ಹೊಸದಾಗಿ ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ (ರೂ.ಗಳಲ್ಲಿ)
01	ಉಪ ನಿಬಂಧಕರು (ಆಡಳಿತ)	01	02	118700-175200/-
02	ಪೊಲೀಸ್ ಅಧೀಕ್ಷಕರು	27	09	112900-171200/-
03	ಸಹಾಯಕ ನಿಬಂಧಕರು (ಆಡಳಿತ)	03	03	83700-155200/-
04	ಪತ್ರಾಂಕಿತ ಸಹಾಯಕರು	05	02	83700-155200/-
05	ಮ್ಯಾನೇಜರ್	05	05	69250-134200/-
06	ಹಿರಿಯ ತೀರ್ಪು ಬರಹಗಾರರು	09	02	69250-134200/-
07	ಭಾಷಾಂತರಕಾರರು	01	04	65950-124900/-
08	ಕಚೇರಿ ಅಧೀಕ್ಷಕರು	31	20	61300-112900/-
09	ಪ್ರಥಮ ದರ್ಜೆ ಸಹಾಯಕರು	103	28	44425-83700/-
10	ಶೀಘ್ರಲಿಪಿಗಾರರು	42	14	44425-83700/-
11	ಕ್ಲರ್ಕ್-ಕಂ-ಟೈಪಿಸ್ಟ್	115	28	34100-67600
12	ಪೊಲೀಸ್ ಉಪ ನಿರೀಕ್ಷಕರು	12	68	61300-112900/-
13	ಸಹಾಯಕ ಪೊಲೀಸ್ ನಿರೀಕ್ಷಕರು	04	76	49050-92500/-
14	ಸಿವಿಲ್ ಹೆಡ್ ಕಾನ್ಸ್ಟೇಬಲ್ (ಸಿ.ಹೆಚ್.ಸಿ)	193	63	44425-83700/-
15	ಆರ್ಮ್ಡ್ ಹೆಡ್ ಕಾನ್ಸ್ಟೇಬಲ್ (ಎ.ಹೆಚ್.ಸಿ)	58	10	44425-83700/-
16	ವಾಹನ ಚಾಲಕ	21	01	34100-67600/-
17	ಮೋಟಾರ್ ಸೈಕಲ್ ಆಡಲ್ರ್	05	03	31775-61300/-
18	ಜಮೇದಾರ್	05	01	31775-61300/-
	ಒಟ್ಟು	640	339	

3) ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರ ದಿನಾಂಕ 20.12.2024 ರಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಗಣನೀಯ ಪ್ರಮಾಣದಲ್ಲಿ ದೂರುಗಳು ಹಾಗೂ ಇಲಾಖಾ ವಿಚಾರಣಾ ಪ್ರಕರಣಗಳು ದಾಖಲಾಗುತ್ತಿರುವ ಹಿನ್ನೆಲೆಯಲ್ಲಿ, ಮಂಜೂರಾತಿ ಇರುವ ಅಪರ ನಿಬಂಧಕರು (ವಿಚಾರಣೆಗಳು), ಉಪ ನಿಬಂಧಕರು (ವಿಚಾರಣೆಗಳು), ಸಹಾಯಕ ನಿಬಂಧಕರು (ಕಾನೂನು ಸಲಹೆ) - ಈ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಂಗ ಅಧಿಕಾರಿಗಳಿಗೆ ಕಾನೂನು ಕೋಶದ ಕೆಲಸ ಕಾರ್ಯಗಳನ್ನು ಹಂಚಿಕೆ ಮಾಡುತ್ತಿರುವುದರಿಂದ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಆಡಳಿತಾತ್ಮಕ ಕೆಲಸ ಕಾರ್ಯಗಳಲ್ಲಿ ಅತಿಯಾದ ಒತ್ತಡ ಉಂಟಾಗುತ್ತಿದ್ದು, ನಿಗದಿತ ಕಾಲಮಿತಿಯೊಳಗೆ ಕಾನೂನು ಸಲಹೆ ಕಾರ್ಯಗಳನ್ನು ನೀಡಲು ಕಷ್ಟಕರವಾಗುತ್ತಿರುವುದರಿಂದ, ಅಧ್ಯಕ್ಷರು, ಕಾನೂನು ಕೋಶ ಶಾಖೆಗಳನ್ನು ತೆರೆಯಬೇಕಾಗಿದ್ದು, ಅಧ್ಯಕ್ಷರು, ಕಾನೂನು ಕೋಶ-1 ಮತ್ತು ಅಧ್ಯಕ್ಷರು, ಕಾನೂನು ಕೋಶ-2 – ಈ ಹುದ್ದೆಗಳಿಗೆ ಪ್ರತ್ಯೇಕವಾಗಿ ಜಿಲ್ಲಾ ನ್ಯಾಯಾಧೀಶರ ವೃಂದದ ನ್ಯಾಯಾಂಗ ಅಧಿಕಾರಿ ಹುದ್ದೆಗಳನ್ನು ಮತ್ತು ಸಹಾಯಕ ಸಿಬ್ಬಂದಿ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೇಳಲಾದ ಮಾಹಿತಿಯನ್ನು ದಿನಾಂಕ 27.05.2025 ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಸರ್ಕಾರಕ್ಕೆ ಒದಗಿಸಿರುತ್ತದೆ.

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ	ವೇತನ ಶ್ರೇಣಿ (ರೂ.ಗಳಲ್ಲಿ)	ಹುದ್ದೆಗಳ ಸಂಖ್ಯೆ
01	ಜಿಲ್ಲಾ ನ್ಯಾಯಾಧೀಶರು	144840-194660/-	02
02	ತೀರ್ಪು ಬರಹಗಾರರು	61300-112900/-	02
03	ಪ್ರಥಮ ದರ್ಜೆ ಸಹಾಯಕರು	44425-83700/-	02
04	ಕ್ಲರ್ಕ್ - ಕಂ - ಟೈಪಿಸ್ಟ್	34100-67600/-	04
05	ದಲಾಯತ್	27000-46675/-	02

4) ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿರುವ ಪ್ರಕರಣಗಳನ್ನು ತ್ವರಿತ ವಿಲೇವಾರಿ ಮಾಡಲು ಅನುವಾಗುವಂತೆ ಮತ್ತು ಸಂಸ್ಥೆಯ ಆಡಳಿತ ಹಿತದೃಷ್ಟಿಯಿಂದ ಜಿಲ್ಲಾ ನ್ಯಾಯಾಧೀಶರ ವೃಂದದ 10 ಅಪರ ನಿಬಂಧಕರು (ವಿಚಾರಣೆಗಳು) ಹಾಗೂ 40 ಸಹಾಯಕ ಸಿಬ್ಬಂದಿ ಹುದ್ದೆಗಳನ್ನೊಳಗೊಂಡಂತೆ ಈ ಮುಂದಿನ ಪಟ್ಟಿಯಲ್ಲಿ ತೋರಿಸಿರುವಂತೆ ಒಟ್ಟು 50 ಹುದ್ದೆಗಳನ್ನು ತಾತ್ಕಾಲಿಕವಾಗಿ ಮೂರು ವರ್ಷಗಳ ಅವಧಿಗೆ ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ	ವೇತನ ಶ್ರೇಣಿ (ರೂ.ಗಳಲ್ಲಿ)	ಹುದ್ದೆಗಳ ಸಂಖ್ಯೆ
01	ಅಪರ ನಿಬಂಧಕರು (ವಿಚಾರಣೆಗಳು)	144840-194660/-	10
02	ತೀರ್ಪು ಬರಹಗಾರರು	61300-112900/-	10
03	ಪ್ರಥಮ ದರ್ಜೆ ಸಹಾಯಕರು	44425-83700/-	10
04	ಕ್ಲರ್ಕ್ - ಕಂ - ಟೈಪಿಸ್ಟ್	34100-67600/-	10
05	ದಲಾಯತ್ (ಗ್ರೂಪ್-ಡಿ)	27000-46667/-	10
	ಒಟ್ಟು		**50**

5) ಮೇಲೆ ವಿವರಿಸಿರುವ ಮೂರೂ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 181 ಸೇಲೋಯು 2024</u>

<u>ಬೆಂಗಳೂರು, ದಿನಾಂಕ 22ನೇ ಏಪ್ರಿಲ್ 2026.</u>

6) ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ **ಪಟ್ಟಿ-2ರಲ್ಲಿನ** ಹುದ್ದೆಗಳನ್ನು ರದ್ದುಗೊಳಿಸುವ ಷರತ್ತಿಗೊಳಪಟ್ಟು, ಒಟ್ಟಾರೆಯಾಗಿ 147 (122+05+20) ಹುದ್ದೆಗಳನ್ನು ಸೃಜಿಸಿ, ಈ ಮೂಲಕ ಆದೇಶಿಸಿದೆ.

ಹೊಸದಾಗಿ ಸೃಜಿಸಿರುವ ಹುದ್ದೆಗಳು : **<u>ಪಟ್ಟಿ-1</u>**

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ (ವೇತನ ಶ್ರೇಣಿ ಪ್ರಸ್ತಾವನೆಯಲ್ಲಿರುವಂತೆ)	ಹುದ್ದೆಗಳ ಸಂಖ್ಯೆ
01	ಉಪ ನಿಬಂಧಕರು (ಆಡಳಿತ)	02
02	ಪೊಲೀಸ್ ಅಧೀಕ್ಷಕರು	03
03	ಸಹಾಯಕ ನಿಬಂಧಕರು (ಆಡಳಿತ)	03

04	ಪತ್ರಾಂಕಿತ ಸಹಾಯಕರು	02
05	ಮ್ಯಾನೇಜರ್	05
06	ಹಿರಿಯ ತೀರ್ಪು ಬರಹಗಾರರು	02
07	ಭಾಷಾಂತರಕಾರರು (ನಿಯೋಜನೆ)	02
08	ಕಚೇರಿ ಅಧೀಕ್ಷಕರು/ಲೆಕ್ಕಧೀಕ್ಷಕರು	12
09	ಪ್ರಥಮ ದರ್ಜೆ ಸಹಾಯಕರು	10
10	ಕ್ಲರ್ಕ್-ಕಂ-ಟೈಪಿಸ್ಟ್	20
11	ಪೊಲೀಸ್ ಉಪ ನಿರೀಕ್ಷಕರು (ನಿಯೋಜನೆ)	30
12	ಸಹಾಯಕ ಪೊಲೀಸ್ ಉಪ ನಿರೀಕ್ಷಕರು (ನಿಯೋಜನೆ)	30
13	ಜಮೇದಾರ್	01
	ಒಟ್ಟು	122

7) ಈ ಕೆಳಕಂಡ 136 ಹುದ್ದೆಗಳನ್ನು ರದ್ದುಗೊಳಿಸಿ ಆದೇಶಿಸಿದೆ.

ಪಟ್ಟಿ-2

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ	ಹುದ್ದೆಗಳ ಸಂಖ್ಯೆ
01	ಎ.ಹೆಚ್.ಸಿ	21
02	ಸಿ.ಪಿ.ಸಿ.	75
03	ಎ.ಪಿ.ಸಿ.	40
	ಒಟ್ಟು	**136**

8) ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಒಂದು ಕಾನೂನು ಕೋಶವನ್ನು ಸ್ಥಾಪಿಸಲು ಈ ಕೆಳಕಂಡ 05 ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ.

ಪಟ್ಟಿ-3

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ (ವೇತನ ಶ್ರೇಣಿ ಪ್ರಸ್ತಾವನೆಯಲ್ಲಿರುವಂತೆ)	ಹುದ್ದೆಗಳ ಸಂಖ್ಯೆ
01	ಜಿಲ್ಲಾ ನ್ಯಾಯಾಧೀಶರು	01
02	ತೀರ್ಪು ಬರಹಗಾರರು	01
03	ಪ್ರಥಮ ದರ್ಜೆ ಸಹಾಯಕರು	01
04	ಕ್ಲರ್ಕ್ - ಕಂ - ಟೈಪಿಸ್ಟ್	01
05	ದಲಾಯತ್ (ಗ್ರೂಪ್-ಡಿ)	01
	ಒಟ್ಟು	**05**

9) ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ 10 ಅಪರ ನಿಬಂಧಕರು (ವಿಚಾರಣೆಗಳು) ಮತ್ತು 10 ಕ್ಲರ್ಕ್-ಕಂ-ಟೈಪಿಸ್ಟ್ ಹುದ್ದೆಗಳನ್ನು ಈ ಕೆಳಕಂಡಂತೆ ತಾತ್ಕಾಲಿಕವಾಗಿ 03 ವರ್ಷದ ಅವಧಿಗೆ ಮಾತ್ರ ಸೃಜಿಸಿ ಆದೇಶಿಸಿದೆ.

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ	ಹುದ್ದೆಗಳ ಸಂಖ್ಯೆ
01	ಅಪರ ನಿಬಂಧಕರು (ವಿಚಾರಣೆಗಳು)	10
02	ಕ್ಲರ್ಕ್ - ಕಂ - ಟೈಪಿಸ್ಟ್	10
	ಒಟ್ಟು	**20**

10) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 879 ವೆಚ್ಚ-12/ 2024, ದಿನಾಂಕ 6.04.2026 ರಲ್ಲಿ ನೀಡಿರುವ ಅಭಿಪ್ರಾಯ ಮತ್ತು ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕವಿತಾ ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ಜಾಗೃತ ವಿಭಾಗ).

PR-163

PROCEEDINGS OF THE GOVERNMENT OF KARNATAKA

SUBJECT: Devolution of funds to the Panchayat Raj Institutions and Urban Local Bodies on the recommendations of the Fifth State Finance Commission.

READ: 1) Government Notification No: FD 264 EXP6 2022, dated:11.10.2023.
2) Government Notification No: FD 264 EXP6 2022, dated:03.01.2026.

Preamble:

Fifth State Finance Commission was constituted vide notification read at (1) above as required under article 243-I and 243-Y of the Constitution of India to review the financial position of the Panchayat Raj Institutions and Urban Local Bodies and make recommendations to the Hon'ble Governor of Karnataka regarding the matters affecting their finances and devolution of funds from the State Government. The terms of reference of this Commission are detailed in the said notification. Further, Commission was informed vide notification read at (2) above to submit a report regarding GBA and 5 CCs in accordance with section 176(3) of Greater Bengaluru Governance Act, 2024.

The Fifth State Finance Commission has submitted its report 2026-2030 regarding the devolution of funds to Panchayat Raj Institutions and Urban Local Bodies including erstwhile BBMP and has also submitted the report for Bengaluru West, South, North, East and Central City corporations of Greater Bengaluru Authority Area. The period of implementation of these recommendations would be from financial year 2026-27 to 2029-30.

The main recommendations of the Commission on devolution of funds from the State Government are as below:

1. The Commission has recommended the devolution of resources in the ratio of 40:60 of NLNORR between the State and the Local Self Governments (PRIs and

ULBs including erstwhile BBMP) respectively inclusive of salaries, Gruhalakshmi and Annabhagya Schemes.

2. The Commission further recommends that, out of the above 60% of NLNORR, the share of the Rural Local Self Governments (PRIs) be 45% and share of Urban Local Self Governments (ULSGs) including erstwhile BBMP be 15%.

3. The Commission recommends that the minimum allocations inclusive of salary component among ZP: TP: GP is to be maintained at the ratio of 28:64:08.

4. The devolution of funds among ULBs is to be done on the following indicators and weightages:

Indicators	**Population**	**Area**	**SC/ST Population**	**Slum Population**	**Total**
Weightage (Percentage)	50	15	20	15	100

5. a) The devolution for each unit of a given category of Rural Local Self Governments (RLSGs) should be based on the following indicators and weightages:

Indicators	**Weightage**		
	ZP	**TP**	**GPs**
Population	60	60	60
Area	20	20	20
SC/ST Population	10	20	10
HDI	10	--	--
Tax Effort Index	NA	NA	10
Total	100	100	100

b) The estimation of share of each unit of Urban Local Self Governments (ULSGs) in each category is based on the following indicators and weightages:

Indicators	**Population**	**Area**	**SC/ST Population**	**Slum Population**	**Total**
Weightage (Percentage)	50	15	20	15	100

6. The Commission has recommended ward wise devolution out of the total budget of the City Corporation, 20% to be kept aside for undertaking inter ward development and the remaining 80% to be shared among each ward of a given CC on the basis of population -70%, Area -20% and the Slum population -10% in the ratio of 70:20:10.

7. The Commission also recommends 20% Untied Grants to all GPs as per Section 206 (2) of KGS&PR Act, 1993, with no conditions so that the GPs can utilise this fund for their necessary developmental activities.

8. 5th State Finance Commission recommends the following grants to PRIs:

(Rs. In lakhs)

RLSGs (PRIs)	**SFC Devolution Grants As Per Formula**		**Establishment Grant (One Time)**	**Maintenance Grant**		**Performance Grants**	**Grant for capacity building**	**Special Grants for GPs of Tribal/Maland/Hilly/Forest areas (OSR<100 lakhs)**
	Min	**Max**		**Min**	**Max**			
ZP	500	1000	500	25	50	50	20	-
TP	300	500	200	15	25	30	10	--
GP	20	60	30	3	5	10	03	10 per annum
	Gradual increase every year by 10% excluding payment for electricity charges.							

9. As far as Untied Grants to ULSGs and City Corporations of Greater Bengaluru Authority are concerned, Commission suggest for keeping the CFC grants outside the SFC grants.

10. Further, Commission recommends that out of the 50% Untied Grants a minimum of 25% should go to ULSGs excluding parastatals and 5 CCs in GBA.

11. Commission recommends following grants to ULSGs;

(Rs. in Lakhs)

ULSGs	Maintenance Grants		Performance Grant (Except 5 CCs under GBA), One-time Establishment grants and Capacity building grants		
	Min	Max			
CC	50	75	50	300	10
CMC	30	45	30	200	07
TMC	20	30	20	100	05
TP	10	15	10	50	03

12. 5th State Finance Commission recommends discontinuation of the Securitization mode of raising loans and providing budget to GPs for payment of electricity expenses based on actual requirements as per monthly billing by ESCOMs, as is done in case of ULSGs. Alternatively, 60% SFC tied grants of about ₹.400.00 crores and 25% of Finance Commission (FC) grants of about ₹.500.00 crores per annum and the budget provision of ₹.300.00 crores may be released to Escrow account.

13. Commission recommends that the net proceeds of the Professional Tax collected be devolved to the LSGs. It is also suggested that the State should address the Central Government to revise the Professional Tax rates by taking appropriate Action.

14. 5th State Finance Commission recommends for assigning a fixed share, at least 5% of city – generated State GST to ULSGs.

15. The Commission has also made the recommendations regarding finances of PRIs & ULBs including erstwhile BBMP, budget for filling gaps in provision of basic service in PRIs and ULBs, and reforms to be done thereon, in levying and collection of tax and non-tax revenues, loans and advances to ULBs etc.

16. In addition to the above, the Commission has made recommendations in respect of governance issues, Strengthening measures specific to PRIs and ULBs, detailed high - level enquiry into entire process, payment and accounting mechanism of electricity bills, securitization electricity dues, etc.

17. In the report 2026-2030 with respect to Bengaluru West, South, North, East and Central City Corporations of Greater Bengaluru Authority area, the Commission has made the following recommendations;

    a) The indicators and weightages of Population at 40%, Area at 30%, SC/ST Population at 15% and slum population at 15% are to be considered for the devolution of financial resources across the 5 CCs.

b) The allocation by City Corporation to the Wards is to be done according to the indicators and weightages of Population at 40%, Area at 30%, SC/ST Population at 10%, Slum Population at 10% and Tax effort at 10%.

c) A grant of at least 40% to be given as untied so that the City Corporation has the freedom to spend on the local needs.

d) The following grants are recommended by Commission:

Maintenance Grants	**Performance Grants**	**One time Establishment Grant**	**Capacity Building Grants**	**Revenue deficit Grant**
10% of the Capital Cost	-Rs 50 cr. to each eligible CC -Rs 5 cr to each eligible ward	Rs. 2 cr for new ward Rs. 1 cr for existing ward without these facilities	Rs.5 cr per year per CC	Grant equal to the Revenue Deficit of the Previous year.

e) Grant of Rs.76.00 cr to GBA under section 20 of GBG Act, 2024.

f) There are recommendations of increasing Own Source Revenue, Measures to augment Own Source Revenue, XVI FC grants, Development Finance, Achieving the SLBs in Service Delivery, Provision for basic utility in informal settlements, Additional Grants to West City Corporation, Establishment of a Division to monitor the FC and SFC grants, Delegation of Financial Powers, Electricity Charges of BESCOM, release of Surcharge on Stamp duty and Governance Issues etc.

g) Under Governance Issues, the Commission recommends that the Government should provide funds every year to take up the construction of at least 250KMs of Road length.

The Government has analysed the Report -2026-2030 regarding devolution of funds to Panchayat Raj Institutions and Urban Local Bodies and Report-2026-2030 regarding Bengaluru West, South, North, East and Central Corporations of Greater Bengaluru Authority Area, submitted by the 5th State Finance Commission. Further, Government has examined, in detail, the implementablitiy of the recommendations with regard to devolutions and its overall implications on the available resources of the State.

The 5th State Finance Commission has recommended the devolution between the State and the Local Bodies at the ratio of 40:60 of NLNORR respectively. The Commission in its report for the year 2024-25 has recommended the devolution between State and Local Bodies at the ratio of 51:49 of NLNORR and now the Commission has increased the share of Local Bodies by 11% points. The Commission has fixed this increased ratio of devolution taking into consideration the allocation towards the two guarantee schemes of Gruhalakshmi

and Annabhagya. The NLNORR will increase significantly year on year due to the growth in GSDP and due to efficient tax effort, whereas the increase in the beneficiaries under the two guarantee schemes would be marginal and will not be significant. In addition, the higher devolution to Local Bodies will reduce the share of the State, thereby restricting the State in taking up developmental programmes.

Further, the Commission itself has discussed, in detail, and has recognized the grave fiscal challenges being faced by the State including the lesser allocation by XV Finance Commission. The responsibilities of the State Government both in areas of welfare and development activities, have greatly increased in recent years when compared to those of Local Bodies.

In view of the above, the recommendation of the Commission for the devolution of funds to Local Bodies at a higher ratio of 60% of NLNORR is not acceptable.

It is due to the reasons and the challenges being faced by the State as above and as cited by the Commission itself in its report, it would not be feasible to accept the recommendations of the Commission fully with regard to Untied Grants and other Grants to PRIs. Further the Local Bodies are expected by the Commission itself to reform Property Taxation, widening tax base, revising user charges, plugging leakages, efficient revenue collection, etc., which would increase their own resource base and further, Local Bodies are expected to maintain their capital assets from collection of user charges. Hence the recommendation of the Commission regarding maintenance grants is not acceptable.

The Commission's recommendation regarding devolution out of Professional tax and State GST is not acceptable because these have already been the part of the of the NLNORR considered for the devolution of funds to Local Bodies and it would also result in further reduction of the State share of devolution.

In respect of the report of 5 City Corporations under Greater Bengaluru Authority Area, the devolution of 15% of NLNORR towards Urban Local Bodies as recommended by Commission includes the share of 5 City Corporations also and the same may be allocated to the City Corporations and wards on the indicators and weightages as provided by the Commission.

In view of the above, the recommendations of the 5th State Finance Commission regarding the devolution of funds between State and Local Bodies and between the Panchayat Raj Institutions and Urban Local Bodies cannot be accepted in total, as every increase in devolution towards Local Bodies will restrict the State in taking up welfare & development programmes.

Therefore, regarding difficulties in implementing the Commission's recommendations in total, cabinet approval has been obtained accommodating concerns of the State Government and for not accepting the recommendations of the Commission regarding the devolution out of Professional Tax and State GST, recommendation regarding other grants to be provided to PRIs and ULBs including 5 City Corporations under Greater

Bengaluru Authority and recommendation regarding discontinuation of Securitization and providing budget for payment of electricity expenses of Gram Panchayats based on the actual requirements as per monthly billing by ESCOMs. Hence, the following order.

GOVERNMENT ORDER NO: FD 18 EXP-6 2025, dated: 31th March 2026

After having studied the observations and difficulties in implementing the recommendations of the 5th State Finance Commission, the Government is pleased to order the following:

1. The total funds to be devolved to Local Bodies will be increased from current 48% to 50% of Non Loan Net Own Revenue Receipts (NLNORR).
2. Out of the above, 35% of NLNORR will be devolved to Panchayat Raj Institutions.
3. 15% of NLNORR will be devolved to ULBs including GBA & 5 CCs in a phased manner over the award period of four years from 2026-27 to 2029-30 as shown below:

Share of ULBs	2026-27	2027-28	2028-29	2029-30
% of NLNORR	12%	13%	14%	15%

4. The grants provided for Gruhalakshmi and Annabhagya schemes will be apportioned between PRIs and ULBs since the beneficiaries are spread across both the urban and rural areas.
5. To continue having flexibility in apportioning grants among various categories of PRIs and ULBs as earlier, which would best address the needs at each level as against the exact ratios prescribed by the Commission.
6. The recommendation of the Commission regarding the increase in Untied Grants to ZPs, TPs and GPs will be implemented in a phased manner.
7. The Central Finance Commission grants will be considered as part of the State devolution as done earlier.
8. The Urban Development Department shall take action to allocate the funds among 5 CCs of Greater Bengaluru Authority Area and other ULBs out of share towards Urban Local Bodies in accordance with the criteria and recommendations of the Commission.
9. The concerned Administrative Departments shall take action for implementing the recommendations of the Commission regarding the fiscal, administrative, institutional and governance issues.

By order and in the name of the Governor
of Karnataka,
(SHREEKRISHNA N. BUGATYAGOL)
Special Officer (ZP) and Ex-Officio
Joint Secretary to Govt.,
Finance Department

PR-164

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಧ್ಯಂತರ ವರ್ತುಲ ರಸ್ತೆ-2023ರ ಪಂಕ್ತೀಕರಣವನ್ನು ನಿರಸನಗೊಳಿಸಿ, ಮಧ್ಯಂತರ ವರ್ತುಲ ರಸ್ತೆ-2007ರ ಪಂಕ್ತೀಕರಣವನ್ನು ಅಲ್ಪ ಬದಲಾವಣೆಯೊಂದಿಗೆ ಮರುನಿಗದಿಪಡಿಸಿ, ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲು ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: ಬಿಎಂಆರ್‌ಡಿಎ/ಎಎಲ್‌ಎನ್/ಸಿಆರ್/44/2011-12,ದಿನಾಂಕ:14-01-2026.

*****

ಪ್ರಸ್ತಾವನೆ:

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ:25.10.2006ರಂದು ನಡೆದ 11ನೇ ಸಭೆಯ ವಿಷಯ ಸಂಖ್ಯೆ:11.5ರ ನಿರ್ಣಯದನ್ವಯ, ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಮಧ್ಯಂತರ ವರ್ತುಲ ರಸ್ತೆ (Intermediate Ring Road) ಯೋಜನೆ ಕೈಗೊಳ್ಳಲು ಬಿಎಂಆರ್‌ಡಿಎ ಕಾಯ್ದೆ, 1985 ಕಲಂ 9(iv)&(v)ರಡಿಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಮಧ್ಯಂತರ ವರ್ತುಲ ರಸ್ತೆ (IRR)ಯನ್ನು ಅಭಿವೃದ್ಧಿಪಡಿಸುವ ಸಂಬಂಧ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ:BMRDA/PROJ/IRR-STRR/2005-06, ದಿನಾಂಕ:08.01.2007ನ್ನು ಕರ್ನಾಟಕ ರಾಜ್ಯಪತ್ರದ ದಿನಾಂಕ:08.01.2007ರ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಉದ್ದೇಶಿತ ಮಧ್ಯಂತರ ವರ್ತುಲ ರಸ್ತೆ (Intermediate Ring Road) ಯು ಒಟ್ಟು 210 ಕಿ.ಮೀ. ಉದ್ದವಿದ್ದು, ತಟ್ಟೆಕೆರೆ, ಹಾರೋಹಳ್ಳಿ, ಬಿಡದಿ, ತಾವರೆಕೆರೆ, ನೆಲಮಂಗಲ, ದೇವನಹಳ್ಳಿ, ಹೊಸಕೋಟೆ, ದೊಮ್ಮಸಂದ್ರ ಮತ್ತು ಆನೇಕಲ್ ಪಟ್ಟಣಗಳನ್ನು ಸಂಪರ್ಕಿಸುತ್ತದೆ.

ಮಧ್ಯಂತರ ವರ್ತುಲ ರಸ್ತೆ (IRR) ಗಾಗಿ ಹೊರಡಿಸಿರುವ ದಿನಾಂಕ:08.01.2007ರ ಅಧಿಸೂಚನೆಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 36596/2015ರಲ್ಲಿ ದಿನಾಂಕ:01.08.2022ರಂದು ನೀಡಿರುವ ಆದೇಶದಲ್ಲಿ ಮಧ್ಯಂತರ ವರ್ತುಲ ರಸ್ತೆ ಪಂಕೀಕರಣವನ್ನು ಸ್ಥಳಾಂತರಿಸುವ ಪ್ರಸ್ತಾವನೆಯನ್ನು ಪರಿಗಣಿಸಿ, ನಾಲ್ಕು ವಾರಗಳ ಒಳಗಾಗಿ ಸೂಕ್ತ ಆದೇಶ ಹೊರಡಿಸುವಂತೆ ಸೂಚಿಸಿರುತ್ತದೆ.

ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ, ಈ ಹಿಂದೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ:08.01.2007ರಲ್ಲಿ ಅಧಿಸೂಚಿಸಿ ಹೊರಡಿಸಲಾಗಿದ್ದ ಮಧ್ಯಂತರ ವರ್ತುಲ ರಸ್ತೆ(IRR) ಪಂಕೀಕರಣವನ್ನು ಮರುನಿಗದಿಪಡಿಸಿ, ಲೋಕೋಪಯೋಗಿ ಇಲಾಖೆ/ ಕೆ.ಆರ್.ಡಿ.ಸಿ.ಎಲ್ ನಿಂದ ಹಾಲಿ ಅಭಿವೃದ್ಧಿಪಡಿಸಿರುವ ಜಿಲ್ಲಾ ಮುಖ್ಯರಸ್ತೆ/ರಾಜ್ಯ ಹೆದ್ದಾರಿ/ ರಾಷ್ಟ್ರೀಯ ಹೆದ್ದಾರಿಗಳ (MDR/SH/NH) ರಸ್ತೆ ಪಂಕ್ತೀಕರಣಕ್ಕೆ ಮಧ್ಯಂತರ ವರ್ತುಲ ರಸ್ತೆ (IRR) ಪಂಕ್ತೀಕರಣವನ್ನು ಪೂರ್ಣಪ್ರಮಾಣದಲ್ಲಿ ಸ್ಥಳಾಂತರಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 85 ಬಿಎಂಆರ್ 2022(ಇ), ದಿನಾಂಕ:30.01.2023 ರಲ್ಲಿ ಪಂಕ್ತೀಕರಣವನ್ನು ಮರುನಿಗದಿಪಡಿಸಲು ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ, ಮಧ್ಯಂತರ ವರ್ತುಲ ರಸ್ತೆ (IRR) ಪಂಕ್ತೀಕರಣವನ್ನು ಮರುನಿಗಧಿಪಡಿಸಿ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ:16.03.2023ರಂದು ಅಧಿಸೂಚನೆ ಸಂಖ್ಯೆ: ಬಿಎಂಆರ್ ಡಿಎ/ಎಎಲ್ ಎನ್/ಸಿ ಆರ್/44/2011-12 ರಲ್ಲಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಯೋಜನಾ/ನಗರಾಭಿವೃದ್ಧಿ ಪ್ರಾಧಿಕಾರದವರು Feasibility Report ನಲ್ಲಿ ಅಭಿಪ್ರಾಯಿಸಿರುವಂತೆ ಹಾಗೂ ದಿನಾಂಕ: 05.12.2025 ರಂದು ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ, ಮರು ನಿಗದಿಪಡಿಸಲಾಗಿರುವ IRR ರಸ್ತೆ ಪಂಕ್ತೀಕೃಣದಲ್ಲಿ ಹಾಲಿ ರಸ್ತೆಗಳ ಅಗಲ ಸ್ಥಳದಲ್ಲಿ 9.ಮೀ ನಿಂದ 30.ಮೀ ವರೆಗೆ ಇರುವ ಸಾಧ್ಯತೆ ಇದ್ದು ಪ್ರಸ್ತಾಪಿತ ಮಧ್ಯಂತರ ವರ್ತುಲ ರಸ್ತೆಯು 90 ಮೀ ಆಗಲ ಇರುವುದರಿಂದ ಹಾಲಿ ಇರುವ ರಸ್ತೆಗಳನ್ನು 90 ಮೀ ಆಗಲಕ್ಕೆ ವಿಸ್ತರಿಸಬೇಕಿದ್ದು ಈ ರಸ್ತೆಗಳ ಲಗತ್ತಾಗಿ ಹಾಲಿ ಅಭಿವೃದ್ಧಿ/ ಬೆಳವಣಿಗೆಗಳು ಮತ್ತು ಅನುಮೋದಿತ ಬಡಾವಣೆಗಳು ಬಂದಿರುವ ಸಾಧ್ಯತೆ ಇರುವುದರಿಂದ ಹಾಗೂ ಆದ್ದರಿಂದ 2007 ಮಧ್ಯಂತರ ವರ್ತುಲ ರಸ್ತೆ(IRR)ಯ ಪಂಕ್ತೀಕರಣವನ್ನು ಈಗಾಗಲೇ ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯ ಎಲ್ಲಾ ಯೋಜನಾ ಪ್ರಾಧಿಕಾರಗಳು/ ನಗರಾಭಿವೃದ್ಧಿ ಪ್ರಾಧಿಕಾರಗಳು ಅನುಮೋದಿತ ಮಹಾಯೋಜನೆಯಲ್ಲಿ ಅಳವಡಿಸಿರುವುದರಿಂದ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ:36596/2015ರಪ್ರಕರಣದಲ್ಲಿ ದಿನಾಂಕ:01.08.2022ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಹಾಗೂ ಈ ರಸ್ತೆ ಅಧಿಸೂಚನೆಯ ಪೂರ್ವದಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ವಸತಿ ವಿನ್ಯಾಸ ನೀಡಿರುವ ಪ್ರದೇಶವನ್ನು ಪರಿಗಣಿಸಿ, ಅದರಂತೆ ಸೂಕ್ತ ಮಾರ್ಪಾಡುಗಳೊಂದಿಗೆ IRR ರಸ್ತೆ ಪಂಕ್ತೀಕರಣವನ್ನು ಅಳವಡಿಸಿಕೊಂಡಲ್ಲಿ ಸದರಿ ಪಂಕ್ತೀಕರಣಕ್ಕೆ ಬರುವ ಭೂ ಅಭಿವೃದ್ಧಿಗಳಿಗೆ ಅನುಮತಿಸುವ ಸಂದರ್ಭದಲ್ಲಿ ಮುಫತ್ತಾಗಿ ನೊಂದಾಯಿಸಿ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳುವುದರಿಂದ ಸರ್ಕಾರಕ್ಕೆ ಆಗುವ ಆರ್ಥಿಕ ಹೊರೆ ಕಡಿತಗೊಳಿಸಿದಂತಾಗುತ್ತದೆ ಎಂದು ಮಹಾನಗರ, ಆಯುಕ್ತರು, ಬಿ.ಎಂ.ಆರ್.ಡಿ.ಎ ಅಭಿಪ್ರಾಯ ನೀಡಿರುತ್ತಾರೆ.

ಅದರನ್ವಯ, ಮಧ್ಯಂತರ ವರ್ತುಲ ರಸ್ತೆ-2007ರ ಪಂಕ್ತೀಕರಣವನ್ನು ಅಲ್ಪ ಬದಲಾವಣೆಯೊಂದಿಗೆ ಪರಿಷ್ಕರಿಸಿ, ನೆಲಮಂಗಲ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪಟ್ಟಣ ವರ್ತುಲ ರಸ್ತೆಗೆ ಸಂಧಿಸುವ ಪ್ರದೇಶದಲ್ಲಿ ಮಾತ್ರ ಬದಲಾವಣೆ ಮಾಡಿ ಹಾಗೂ ಆನೇಕಲ್-ಹೊಸಕೋಟೆ ಮಾರ್ಗದಲ್ಲಿ ಬರುವ ಉಪನಗರ ವರ್ತುಲ ರಸ್ತೆ-2006ರ ರಸ್ತೆ ಪಂಕ್ತೀಕರಣಕ್ಕೆ ವಿಲೀನಗೊಳಿಸಿ ಉಳಿದಂತೆ ಮಧ್ಯಂತರ ವರ್ತುಲ ರಸ್ತೆ-2007ರ ಪಂಕ್ತೀಕರಣವನ್ನು ಯಥಾವತ್ತಾಗಿ ಕಾಯ್ದಿರಿಸಿ ಪರಿಷ್ಕೃತ ಅಧಿಸೂಚನೆ ಹೊರಡಿಸಲು ಹಾಗೂ ಮಧ್ಯಂತರ ವರ್ತುಲ ರಸ್ತೆ-2023ರನ್ನು ನಿರಸನಗೊಳಿಸುವ ಕುರಿತು ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 50 ಬಿಎಂಆರ್ 2026(ಇ),
ಬೆಂಗಳೂರು ದಿನಾಂಕ:30-04-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಧ್ಯಂತರ ವರ್ತುಲ ರಸ್ತೆ-2023ರ ಪಂಕ್ತೀಕರಣವನ್ನು ನಿರಸನಗೊಳಿಸಿ, ಮಧ್ಯಂತರ ವರ್ತುಲ ರಸ್ತೆ-2007ರ ಪಂಕ್ತೀಕರಣವನ್ನು ಅಲ್ಪ ಬದಲಾವಣೆಯೊಂದಿಗೆ, ನೆಲಮಂಗಲ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪಟ್ಟಣ ವರ್ತುಲ ರಸ್ತೆಗೆ ಸಂಧಿಸುವ ಪ್ರದೇಶದಲ್ಲಿ ಬದಲಾವಣೆ ಮಾಡಿ ಹಾಗೂ ಆನೇಕಲ್-ಹೊಸಕೋಟೆ ಮಾರ್ಗದಲ್ಲಿ ಬರುವ ಉಪನಗರ ವರ್ತುಲ ರಸ್ತೆ-2006ರ ರಸ್ತೆ ಪಂಕ್ತೀಕರಣಕ್ಕೆ ವಿಲೀನಗೊಳಿಸಿ ಮರುನಿಗದಿಪಡಿಸಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಷರತ್ತುಗಳು :

1. ಮಧ್ಯಂತರ ವರ್ತುಲ ರಸ್ತೆ-2007ರ ಪಂಕ್ತೀಕರಣದಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಡುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳು ಹಾದುಹೋಗುತ್ತಿದ್ದರೆ ಸದರಿ ಭಾಗದಲ್ಲಿ ಬಿಎಂಆರ್‌ಡಿಎ ವತಿಯಿಂದಲೇ ಭೂಸ್ವಾಧೀನ ಒಳಗೊಂಡಂತೆ ಅಗಲೀಕರಣ ಕಾಮಗಾರಿಯನ್ನು ಕೈಗೊಂಡು ಅಭಿವೃದ್ಧಿಪಡಿಸಿ, ನಿರ್ವಹಣೆ ಕೈಗೊಳ್ಳುವುದು;

2. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ.36596/2015 ರಲ್ಲಿ ದಿನಾಂಕ 01.08.2022 ರಂದು ನೀಡಿರುವ ತೀರ್ಪಿಗೆ ವ್ಯತಿರಿಕ್ತವಾಗದಂತೆ ಖಚಿತಪಡಿಸಿಕೊಂಡು ಬಿಎಂಆರ್‌ಡಿಎ ವತಿಯಿಂದ ಪರಿಷ್ಕೃತ ಅಧಿಸೂಚನೆ ಹೊರಡಿಸತಕ್ಕದ್ದು.

ಈ ಆದೇಶವನ್ನು ದಿನಾಂಕ:16/04/2026 ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ/213/2026 ರಲ್ಲಿ ಕೈಗೊಂಡ ನಿರ್ಣಯದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,**

(ರಾಜೇಶ್ ಎಸ್.ಸೂಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
(ಬಿ.ಡಿ.ಎ & ಬೆಂ-1).

PR-165

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH